## ಪುಟ್ಟಾರಿ ಆನೆ ಪುಟ್ ಪುಟ್




ಆನಂದ ಪಾಟೀಲ ಅವರ 'ಪುಟ್ಟಾರಿ ಆನೆ ಪುಟ್ ಪುಟ್' ಕಾದಂಬರಿ ಮಕ್ಕಳು ಸೇರಿದಂತೆ ಎಲ್ಲರೂ ಓದಬಹುದು. ಅದು ಪ್ರೌಢಶಾಲಾ ಮಕ್ಕಳ ವಯೋಮಾನದವರಿಗೆ ಅತ್ಯಂತ ಸೂಕ್ತ. ತೀರಾ ಚಿಕ್ಕವರಿಗೆ ಸರಿ ಆಗಲಿಕ್ಕಿಲ್ಲ. ಕನ್ನಡದಲ್ಲಿ ಮಕ್ಕಳಿಗಾಗಿ ಬಂದ ಕಾದಂಬರಿಗಳಲ್ಲಿ ಇಷ್ಟು ದೊಡ್ಡದು ಮತ್ತೊಂದಿಲ್ಲ ಎಂದು ಭಾವಿಸಿದ್ದೇನೆ. ಭಾರತೀಯ ಭಾಷೆಗಳಲ್ಲಿಯೇ ಇಂತಹ ಪ್ರಯತ್ನ ಆಗಿರಲಿಕ್ಕಿಲ್ಲ. ಒಂದು ಆನೆಯ ಸುತ್ತ ಕಾದಂಬರಿ ವಿಸ್ತಾರ ಆಗುತ್ತಾ ಹೋಗುತ್ತದೆ. ಫ್ಯಾಂಟಸಿ ಇದೆ. ಮಕ್ಕಳ ಸುತ್ತಲೇ ಕಥೆ ನಿರೂಪಣೆ ಆಗುತ್ತದೆ. ಇದನ್ನು ಮಕ್ಕಳಿಗೆ ಕೊಟ್ಟು ಓದಿಸಿದ ಪ್ರಯತ್ನ ಕೂಡ ಮಾಡಿದ್ದೇನೆ. ಮಕ್ಕಳು ದೊಡ್ಡ ಕೃತಿ ಓದುವುದಿಲ್ಲ ಎನ್ನುವ ನಂಬಿಕೆಯನ್ನು ಹುಸಿಗೊಳಿಸಿದ್ದಾರೆ.

ಮಕ್ಕಳಿಗೆ ಇಷ್ಟ ಆದರೆ ಎಷ್ಟೇ ದೊಡ್ಡ ಕೃತಿ ಆಗಿದ್ದರೂ ಅದನ್ನು ಓದಬಲ್ಲರು. ಇಂತಹ ಹೊಸ ಪ್ರಯೋಗವನ್ನು ಅಭಿನವ ಪ್ರಕಾಶನ ಮಾಡಿದೆ. ಈಗ ಮಕ್ಕಳಿಗೆ ಬೇಸಿಗೆ ರಜೆ ಕಾಲ. ಅವರಿಗೆ 'ಪುಟ್ಟಾರಿ ಆನೆ ಪುಟ್ ಪುಟ್' ಕೊಟ್ಟರೆ ಖುಷಿಯಾಗಿ ಓದುತ್ತಾರೆ ಎನ್ನುವುದು ನನ್ನ ಅನುಭವಕ್ಕೆ ಬಂದಿದೆ. ಆ ಪ್ರಯೋಗವನ್ನು ನಾನೇ ಮಾಡಿದ್ದೇನೆ. 'ಹ್ಯಾರಿ ಪಾಟರ್'ನಂತಹ ದೊಡ್ಡ ಪುಸ್ತಕಗಳನ್ನು ಇಂಗ್ಲಿಷ್ ಬಲ್ಲ ಮಕ್ಕಳು ಓದಿದ್ದಾರೆ. ಕನ್ನಡದ ಮಕ್ಕಳಿಗೆ ಇದು ಹೊಸ ಮಾದರಿ ಎಂದು ಅನಿಸುತ್ತದೆ.

—ತಮ್ಮಣ್ಣ ಬೀಗಾರ

## ಮನೋವಿಕಾಸಕ್ಕೆ ಹಕ್ಕೀ ಪುಚ್ಚ

ರಜೆಯ ಮೋಜಿನ ಜೊತೆಗೆ ಮಕ್ಕಳು ಸಹಪಠ್ಯ ಓದುವ ಅಗತ್ಯ ಇದೆ. ಮಕ್ಕಳು ಕಥೆಗಳನ್ನು ಓದುವುದರಿಂದ ಅವರ ಮನಸು ವಿಕಾಸವಾಗುತ್ತೆ. ಕವಿತೆಯನ್ನೂ ಓದಬಹುದು, ಇದರಿಂದ ಕಲ್ಪನೆಯ ಹರವು ಹೆಚ್ಚುತ್ತದೆ. ಚೆನ್ನವೀರ ಕಣವಿ ಅವರ 'ಹಕ್ಕೀ ಪುಚ್ಚ' ಕವನ ಸಂಕಲನ ಇದೆ. ಎಂ.ಡಿ. ಗೋಗೇರಿ ಅವರ ಕಥೆಗಳನ್ನು ಮಕ್ಕಳು ಓದಬಹುದು. ಅವರು ಎಲ್ಲೂ ನೀತಿ ಪಾಠವನ್ನು ಹೇಳಿಲ್ಲ. ಕಥೆಯ ವಸ್ತು ಮತ್ತು ನಿರೂಪಣೆಯಲ್ಲಿ ಒಂದು ಮೌಲ್ಯವನ್ನು ತೋರಿಸಿದ್ದಾರೆ. ಹೊಸ ಆವಿಷ್ಕಾರದ ಪ್ರಯತ್ನವನ್ನು ಅವರು ಮಾಡಿದ್ದಾರೆ. ಸೃಜನಶೀಲ ಅವರ ಕಥೆಗಳು ಮಕ್ಕಳನ್ನು ಬೇರೆಯದೇ ಆದ ಲೋಕಕ್ಕೆ ಕರೆದುಕೊಂಡು ಹೋಗುತ್ತವೆ. ಹಾಗಾಗಿ ಅವರ ಬರಹ ಮಕ್ಕಳಿಗೆ ಇಷ್ಟ ಆಗಬಹುದು. ಜೊತೆಗೆ ಹೊಸ ಚಿಂತನೆಯನ್ನೂ ಹುಟ್ಟುಹಾಕಬಹುದು ಎಂದು ನನಗೆ ಅನಿಸುತ್ತದೆ.

—ಪ್ರಕಾಶ್ ಎಸ್. ಮನ್ನಂಗಿ










## ವಸಂತ ಮನೆಗೆ ಬರಲಿ

'ವಸಂತ ಬಾಲ ಸಾಹಿತ್ಯ ಮಾಲೆ' ಸರಣಿಯಲ್ಲಿ ವಸಂತ ಪ್ರಕಾಶನದಿಂದ ಮಕ್ಕಳಿಗಾಗಿ ಸುಮಾರು ಪುಸ್ತಕ ಬಂದಿವೆ. ಅದರಲ್ಲಿ ಶ್ರೀನಿವಾಸ ಉಡುಪ ಅವರ 'ಪಾಪು ಪದ್ಯಗಳು ಮತ್ತು ಓಬೀರಾಯನ ಕಥೆ' ಕವಿತೆ–ನಾಟಕವೂ ಒಂದು. ಟಿ.ಎಸ್. ರಮಾನಂದ ಅವರ 'ಮರಿ ಆನೆಗೆ ಮಾತು ಬಂತು ಮತ್ತು ಇತರ ಕಥೆಗಳು' ಇವು ಸೇರಿದಂತೆ ಚಿಂತಾಮಣಿ ಕೊಡ್ಲೆಕೆರೆ, ಎಚ್.ಎಸ್. ವೆಂಕಟೇಶ ಮೂರ್ತಿ ಅವರ ಕವನ ಸಂಕಲನ, ಡುಂಡಿರಾಜ್ ಅವರ ನಾಟಕ, ಬಸುಬೇವಿನ ಗಿಡದ ಅವರ ಕಾದಂಬರಿ, ಕೆ.ವಿ. ತಿರುಮಲೇಶ್ ಅವರ ವಿಶೇಷ ಪದ್ಯಗಳಿವೆ. ಎಲ್ಲ ಕೃತಿಗಳು ವಿಭಿನ್ನ. ಒಂದಕ್ಕಿಂತ ಒಂದು ಚಂದ ಇವೆ. ಅವೆಲ್ಲವನ್ನೂ ಮಕ್ಕಳು ಓದಬಹುದು.

ಸಮಕಾಲೀನ ಸಂದರ್ಭಕ್ಕೆ ಸೂಕ್ತ ಆಗುವ ಹೊಸ ಮಾದರಿಯ ಬರಹಗಳ ಇಂತಹ ಕೃತಿಗಳನ್ನು ಮಕ್ಕಳಿಗೆ ತಲುಪಿಸುವ ಕೆಲಸವನ್ನು ಮಾಡಬೇಕಿದೆ. ಹೊಸ ಕಾಲದ ಮಕ್ಕಳ ಮನೋಭೂಮಿಕೆಗೆ ಅನುಸಾರವಾಗಿ ಈ ಕೃತಿಗಳು ರೂಪಿತವಾಗಿವೆ. ಮಕ್ಕಳ ಸಾಹಿತ್ಯ ಎಂದ ತಕ್ಷಣ ನಮ್ಮ ಕಲ್ಪನೆಗೆ ಬರುವ ಚಿತ್ರಕ್ಕಿಂತ ಇವು ಭಿನ್ನವಾಗಿವೆ. ಈ ಕಾಲದ ಮಕ್ಕಳ ಬೇಕು ಬೇಡಗಳನ್ನು ಗಮನದಲ್ಲಿ ಇಟ್ಟುಕೊಂಡು ಬಂದ ಕೃತಿಗಳು. ಸಾಂಪ್ರದಾಯಿಕ ಜಾಡನ್ನು ದಾಟುವ ಪ್ರಯತ್ನ ಈ ಮಾಲೆಯ ಪ್ರಕಾಶನದಲ್ಲಿ ಕಾಣಿಸುತ್ತದೆ. ಇಂಥ ಪುಸ್ತಕಗಳನ್ನು ಮಕ್ಕಳಿಗೆ ದೊರಕಿಸುವ ಕೆಲಸವನ್ನು ತಾಯಿ–ತಂದೆ ಮಾಡಬೇಕು. ಬಹಳ ಸಂದರ್ಭದಲ್ಲಿ ಸಮಸ್ಯೆ ಆಗುವುದು ಒಳ್ಳೆಯ ಪುಸ್ತಕ ಬಂದಾಗ ಪೋಷಕರಿಗೆ ಆ ಬಗ್ಗೆ ಮಾಹಿತಿ ಇರುವುದಿಲ್ಲ.

—ರಾಧೇಶ ತೋಳ್ಪಾಡಿ